doc-191
T.P-4

Regd No M 1299 34'th Year ತಾ|| 16—5—51

SATYAVADI

ಸತ್ಯವಾದಿ

ಸಂಸ್ಥಾಪಕರು- ಅರಮನೆ ಸಿರಸ್ತೆದಾರ್ ಎ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಭಾವಣಿ ತಲೆ ಮೇಲೆ ! ಆರು ಮಂದಿ ಸತ್ತರು

ನಿನ್ನೆ ಸಂಜೆ ಬೆಂಗಳೂರು ನರಸಿಂಹ ರಾಜ ರಸ್ತೆಯಲ್ಲಿರುವ ಕಿನ್ನೌಡ್ ರಿಸ್ಟಾ ರೆಂಟಿನ ಎದುರು ಭಾಗಲ್ಲಿರುವ ಮನೆಯಲ್ಲಿ ರಾತ್ರೆ ಊಟ ಮಾಡುತ್ತಿದ್ದಾಗ ಛಾವಣಿ ಕುಸಿದು 6 ಮಂದಿ ಮುಸ್ಲಿಂ ಸಂಸಾರದವರು ಸತ್ತರು

ಸಾಲ ಕೊಡಬಹುದು

ಅರ್ಧ ಕಡ ಮತ್ತು ಅರ್ಧ ದಾನ ಒಪ್ಪಂದದ ಬಡಲು ನೇರವಾಗಿ 20 ಮಿಲಿಯ ಟನ್ ಧಾನ್ಯವನ್ನು ಭಾರತಕ್ಕೆ ಕಡ ಕೊಡಲು ಅಮೇರಿಕಾ ಸೆನೆಟ್ ಒಡಂಬಡಬಹುದೆಂದು ಅಲೆಕ್ಸಾಂಡರ್ ಸ್ಮಿತ್ ವಾಷಿಂಗ್ಟನ್ನಲ್ಲಿ ಅಭಿಪ್ರಾಯಪಟ್ಟಿದ್ದಾರೆ

ಸಂಭವವಿಲ್ಲ

ಕಾಶ್ಮೀರ ಮೌಲ್ಯಶ್ಮಿಕಗಾರ ಗ್ರಾಹಂ ರವರ ಸಂಧಾನ ಸಫಲವಾಗುವ ಅಶೆ ಇಲ್ಲವೆಂದು ಸರ್ ಜಫ್ರುಲ್ಲ ಕರಾಚಿಯಲ್ಲಿ ತಿಳಿಸಿದ್ದಾರೆ

× ಬೊಂಬಾಯಿ ವೈದ್ಯ ಕಾಲೇಜಿನಲ್ಲಿ ಕೆಲವು ಜಾತಿಯವರಿಗೆ ಸ್ಥಾನ ಮಾಸಲಿದ್ದುದು ರದ್ದಾಯಿತು

× ಮೈಸೂರು ಶಾಸನ ಸಭೆ ಅಧ್ಯಕ್ಷ ಶ್ರೀ ವಿ.ವೆಂಕಟಪ್ಪನವರು ಇಂಗ್ಲೆಂಡಿಗೆ ತೆರಳಲಿದ್ದಾರೆ

× ಬೊಂಬಾಯಿ ಪ್ರೈ|| ನ್ಯಾಯಾಧೀಶರು ಪಾರ್ಲಿಮೆಂಟ್ ಸದಸ್ಯ ಫ್ರಾಂಕ್ ಅಂಥನಿಯವರಿಗೆ ರೂ 300 ದಂಡ ಇಲ್ಲವೆ 1 ತಿಂಗಳು ಸಾದ ಸಜೆಯನ್ನು ಮಾನಸಷ್ಟ ಮೊಕದ್ದಮೆಯಲ್ಲಿ ವಿಧಿಸಲು ಅವರು ದಂಡತೆತ್ತರು

ಪ್ರಭುಗಳ ಒಪ್ಪಿಗೆ

ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿ ಬಳಿ ಸಭೆ ನಿರೋಧಿಸುವ ಕಾನೂನು, ಮೈಸೂರು ಸಿನಿಮಾ ತೆರಿಗೆ ಕಾನೂನು, ಪಾಳುಭೂಮಿ ವ್ಯವಸಾಯ ಕಾನೂನು, ಆರೋಗ್ಯ ತೆರಿಗೆ ಕಾನೂನು ಇವುಗಳನ್ನು ಶ್ರೀಮನ್ಮಹಾರಾಜರು ಅಂಗೀಕರಿಸಿರುವರು

ಅಧಿಕಾರಿಗಳ ಸೆರೆ

ಪಾಕಿಸ್ತಾನವನ್ನು ಸರ್ವಾಧಿಕಾರದಲ್ಲಿಡಬೇಕೆಂದು ಸಿಕೂರಿ ಮಾಡಿದ ಆಜ್ಞಾಪನೆ ಮೇಲೆ ಇನ್ನೂ ಹತ್ತು ಮಂದಿ ಸೇನೆ ಹಾಗೂ ವಿಮಾನ ಅಧಿಕಾರಿಗಳನ್ನು ಪಾಕಿಸ್ತಾನ ಸರ್ಕಾರ ಬಂಧಿಸಿರುವುದಾಗಿ ಕರಾಚಿ ವಾರ್ತೆ

ಚೀಣ ಮೇಲೆ ಆರ್ಥಿಕ ದಿಗ್ಬಂಧನ — ಭಾರತದ ಮೇಲೆ ಏನು ಪರಿಣಾಮ ಆಗುವುದೋ ಗೊತ್ತಿಲ್ಲ!

ಕೆಂಪು ಚೀಣದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸುವ ಸೂಚನೆಯಿಂದ ಭಾರತಕ್ಕೆ ಚೀಣದಿಂದ ಧಾನ್ಯ ಬರುವ ಬಗೆಗೆ ತೊಂದರೆ ಏನಾದರೂ ಆಗುವದೇ ಎಂಬ ಪ್ರಶ್ನೆಗೆ ನಿನ್ನೆ ಪಾರ್ಲಿಮೆಂಟಿನಲ್ಲಿ ಸಚಿವ ಶ್ರೀ ಕೆ ಎಂ ಮುನಷಿ ಹೇಳಿಕೆಯಿತ್ತು ಏನನ್ನೂ ಈಗಲೇ ನುಡಿಯಲು ಸಾಧ್ಯವಿಲ್ಲ ಎಂದರು

ಭಾರತ ಪಾರ್ಲಿಮೆಂಟ್ ನಿನ್ನೆ ದಿನ ಸಪ್ರಜಾ ಸಾತಿನಿಧ್ಯ ದ್ವಿತೀಯ ಮಸೂದೆಯ ಹತ್ತು ಕ್ಲಾಸ್‌ಗಳನ್ನು ಅಂಗೀಕರಿಸಿತು ಅಗತ್ಯ ಸೌಲಭ್ಯಗಳನ್ನು ಮತದಾರರಿಗೆ ಒದಗಿಸುವಹಾಗಿ ಈ ಸಂಬಂಧದಲ್ಲಿ ಡಾ|| ಅಂಬೇಡ್ಕರರು ತಿಳಿಸಿದರು

ಬೊಂಬಾಯಿ ಲಾಯಿಡ್ ಬ್ಯಾಂಕಿನ ದರೋಡೆಯಲ್ಲಿ ಅನೋಖಲಾಲ್ ಮತ್ತು ಹರಿನಾರಾಯಣ ಎಂಬವರು ಪ್ರಮುಖರಾಗಿದ್ದರೆಂದು ಸಾಕ್ಷ್ಯ ದೊರೆತಿದೆ

ಎಣ್ಣೆ ಬಿಕ್ಕಟ್ಟಿನ ಬಗೆಗೆ ಪರ್ಷಿಯ ಕ್ಕೆ ಕಳಿಸಲಾಗುವ ಸೂಚನೆಗೆ ಹರ್ಬರ್ಟ ಮಾರಿಸ್ಸನ್ನರು ಕೊನೆ ಪರಿಶೀಲನೆ ಮಾಡಿದರು ಸೂಚನೆ ತೀವ್ರ ಪದಗಳಿಂದ ಕೂಡಿದೆ ಪತ್ರ ನಾಳೆಯ ವಳಗೆ ತಲುಪಲಾರದು – ಎಂದು ಲಂಡ್ಕ ವಾರ್ತೆ

ಪಾಕಿಸ್ತಾನಕ್ಕೆ ಬಟ್ಟೆ

ಭಾರತದಿಂದ 190 ಮಿಲಿಯ ಗಜ ಬಟ್ಟೆ ರಫ್ತು ಮಾಡಲು ಭಾರತ ಸರ್ಕಾರ ಕ್ರಮವನ್ನು ನಿನ್ನೆ ಹೊರಗೆಡವಿದೆ ಪಾಕಿಸ್ತಾನಕ್ಕೆ 55 ಮಿಲಿಯ ಗಜ ಬಟ್ಟೆ ಕಳಿಸಲ್ಪಡುವದೆಂದು ಬೊಂಬಾಯಿ ವರ್ತಿ

ದಿವ್ಯವಾಣಿ

ಸುಳ್ಳುಗಾರನನ್ನು ನೀವು ಎಷ್ಟು ಸಂಬುತ್ತಿರೋ, ಜಂಭ ಕೊಚ್ಚುವವನನ್ನೂ ಅಷ್ಟೇ ನಂಬಕಕ್ಕದ್ದು.

— ಚಿಂಗ್ ಚೌ.

ಅಕ್ಕಿ ಚೆನ್ನಾಗಿಲ್ಲ

ಪಾಕಿಸ್ತಾನದಿಂದ ಭಾರತಕ್ಕೆ ಅಕ್ಕಿ ಸಂಬಂಧಾಜು ಮಾಡುವ ಒಡಂಬಡಿಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕೇರಾಳ ವಾರ್ತೆ ಈ ಬಗ್ಗೆ ಮಾತುಕತೆ ನಡೆಸಲು ಆಹಾರ ಕಾರ್ಯದರ್ಶಿ ಶ್ರೀ ವಿಷ್ಣುಸಹಾಯರು ಇಂದು ಕರಾಚಿಗೆ ವಿಮಾನದಲ್ಲಿ ಹಾರುವರು

ಗಯಾ ವಕೀಲ ಸಂಘ ನಿನ್ನೆ ತುರ್ತು ಸಭೆ ಸೇರಿ ರಾಜ್ಯಾಂಗ ತಿದ್ದುಪಡಿ ಮಸೂದೆಯನ್ನು ಮುಂದಕ್ಕೆ ಹಾಕಬೇಕೆಂದು ನಿರ್ಣಯಿಸಿ ಪಾರ್ಲಿಮೆಂಟ್ ಅಧ್ಯಕ್ಷರಿಗೆ ತಂತಿ ಕಳಿಸಿದೆ

ಮೇ 8 ರ ಭದ್ರತಾ ಮಂಡಲದ ಸಮರ ಸಮಾಪ್ತ ನಿರ್ಣಯವನ್ನು ಸಿರಿಯಾ-ಇಸ್ರೇಲುಗಳು ಅಂಗೀಕರಿಸಿರುವೆಂದು ನ್ಯೂಯಾರ್ಕ್ ವಾರ್ತೆ

ಭಾರತ ರಾಜ್ಯಾಂಗ ತಿದ್ದುಪಡಿ ಮಸೂದೆ ಸೂಚಿ ಸಮಿತಿಗೆ ಹೋಗಬೇಕೆಂದು ಪಂ|| ನೆಹರು ಈ ದಿವಸ ದೆಹಲಿ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ

× 110 ವಿದ್ಯಾರ್ಥಿಗಳ ಪೈಕಿ 100 ಮಂದಿ ಎಸ್ ಎಸ್ ಸಿ ಪರೀಕ್ಷೆಗೆ ಬಹಿಷ್ಕಾರ ಹಾಕಿದರೆಂದು ಖಟ್ಮಂಡು ವರ್ತಿ

ಕೇಂದ್ರಾಡಳಿತಧವರಿಗೆ ಶ್ರೀ ಶ್ರೀಗಳ ತಂತಿ

(ಸ್ವಂತ ಸುದ್ದಿಗಾರರಿಂದ ತಂತಿ)

ಅಬ್ಬು ಮೇ 15

ಕಾನ್ಪುರದಲ್ಲಿ ಇತ್ತೀಚಿಗೆ ಸಮಾವೇಶಗೊಂಡಿದ್ದ ಅಖಿಲ ಭಾರತ ಧರ್ಮ ಸಂಘ ಸಂವೇಳನ ಮತ್ತು ರಾಮರಾಜ್ಯ ಪರಿಷತ್‌ನಲ್ಲಾದ ನಿರ್ಣಯದಂತೆ ನಾವು ರಾಜ್ಯಾಂಗದ ತಿದ್ದುಪಡಿಯನ್ನು ಪ್ರತಿಭಟಿಸುತ್ತೇವೆ ಆದುದರಿಂದ ತಿದ್ದುಪಡಿ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ವಾಗ್ದಾನ ಮಾಡಿದ ಮೂಲಭೂತ ಹಕ್ಕುಗಳನ್ನು ಯಾವ ಬದಲಾವಣೆಯಿಲ್ಲದೇ ರಕ್ಷಿಸಬೇಕೆಂದು ನಿಮ್ಮನ್ನು ಒತ್ತಾಯಪಡಿಸುತ್ತೇವೆ.

— ಎಂದು ಅಖಿಲ ಭಾರತ ಧರ್ಮ ಸಂಘದ ಅಧ್ಯಕ್ಷರು ಮತ್ತು ದ್ವಾರಕಾ ಶ್ರೀ ಶಾರದಾ ಪೀಠದ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಮಾನ್ಯ ರಾಜೇಂದ್ರಬಾಬು, ನೆಹರೂಜಿ ನ್ಯಾಯಾಂಗ ಸಚಿವರು ಮತ್ತು ಪಾರ್ಲಿಮೆಂಟ್ ಅಧ್ಯಕ್ಷರಿಗೆ ತಂತಿ ಕಳಿಸಿದ್ದಾರೆ

ಹೀಗೆಯೇ ಸಾರ್ವಜನಿಕರು ಸರ್ಕಾರವನ್ನು ತಂತೀ ಮೂಲಕ ಒತ್ತಾಯಪಡಿಸಬೇಕೆಂದು ಶ್ರೀ ಜಗದ್ಗುರುಗಳವರು ತಿಳಿಸಿರುತ್ತಾರೆ.

ಮಾನ್ಯ ರಾಜೇಂದ್ರಬಾಬುಗಳವರು ದ್ವಾರಕಾಕ್ಕೆ ನಿನ್ನೆ ಭೇಟಿ ಇತ್ತಿದ್ದರು. ಅವರಿಗೆ ಶ್ರೀ ಜಗದ್ಗುರುಗಳು ಅಶೀರ್ವಾದವನ್ನು ಕಳುಹಿಸಿದ್ದರು.

ಶ್ರೀ ಜಗದ್ಗುರುವರು ಶ್ರೀ ಶಂಕರ ಜಯಂತಿಯನ್ನು ಇಲ್ಲಿ ವೈಭವವಾಗಿ ನೆರವೇರಿಸಿದರು ಮತ್ತು ದಿನವಹಿ ಉಪನ್ಯಾಸ ಮಾಡುತ್ತಿರುವರು.

ಭಾರತ ಘಟನಾ ಸಹಕಾರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಾಣನಾಥ ಮೆಹತಾರವರು ಪ್ರಧಾನ |ಮಂತ್ರಿ ಪಂ|| ನೆಹರುರಿಂದ ದೆಹಲಿ ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟ ಘಟನಾ ತಿದ್ದುಪಡಿ ಮಸೂದೆ ಕಾನೂನು ವಿರೋಧವಾದುದೆಂದು ಬುದಾಗಿ ಬೊಂಬಾಯಿನಲ್ಲಿ ಹೇಳಿದ್ದಾರೆ.

ಬೆಂಗಳೂರು ಇಂಜಿನಿಯರಿಂಗ್ ಕಾಲೇಜಿನ ಜಯದೇವ ಎಂಬ 24 ವರ್ಷದ ವಿದ್ಯಾರ್ಥಿ ಓಡುತ್ತಿದ್ದ ರೈಲಿನಿಂದ ಯಶವಂತಪುರ ಬಳಿ ಬಿದ್ದು ತೀವ್ರ ಗಾಯಗೊಂಡು ಎಕ್ಕೊರಿಯು ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದಾರೆ.

ಸಂಯುಕ್ತ ಸಂಸ್ಥಾನದ ಪಿಯರ್ಲ್ಸ್ ಕೊರಿಯಾದಲ್ಲಿ ಚೀಣ ಕಮ್ಯುನಿಸ್ಟರ ಶರಣಾಗತರಾಗುವರೆಂದು ಭವಿಷ್ಯ ನುಡಿದಿರುವರು.

ಮಾತೃಪ್ರೇಮ

ಸುಮಾರು ಒಂದು ಶತಮಾನದ ಹಿಂದೆ ಅಮೇರಿಕಾದ ಕ್ಯಾಲಿಫೋರ್ನಿ
ಯಾದಲ್ಲಿ ಧಂಗಾದ ಗಣಿಗಳಿವೆಯೆಂದು ತಿಳಿದು ಬಂದಾಗ ಗಣಿಗಳಲ್ಲಿ ಕೆಲಸ
ಮಾಡಿ ಧನಾರ್ಜನೆ ಮಾಡಲು ಜನರು ಇಲ್ಲಿಗೆ ಅಮೇರಿಕಾದ ಇತರ ಭಾಗ
ಗಳಿಂದ ಹೋಗಲಾರಂಭಿಸಿದರು.

ಹಾಗೆ ಹೋದವರಲ್ಲಿ ಒಬ್ಬನು ಅಲ್ಲಿಯ ಸ್ಥಿತಿಗತಿಗಳು ಅನುಕೂಲವಾಗಿ
ವುದನ್ನು ಕಂಡಕೂಡಲೇ ನ್ಯೂಯಾರ್ಕಿನಲ್ಲಿದ್ದ ತನ್ನ ಹೆಂಡತಿಗೆ, ತನ್ನ 8 ವ
ರ್ಷ ವಯಸ್ಸಿನ ಮಗನೊಂದಿಗೆ ಹೊರಟುಬರಲು ಬರೆದು ಕಳುಹಿಸಿದನು.

ಆಗಿನ ಕಾಲದಲ್ಲಿ ನ್ಯೂಯಾರ್ಕಿನಿಂದ ಕ್ಯಾಲಿಫೋರ್ನಿಯಾಕ್ಕೆ ಬರಲು
ಕ್ಷಣ ಅಮೇರಿಕಾದ ಹಾರ್ಡ್ ಭೂಪ್ರದೇಶದ ಮಾರ್ಗವು ಮಾತ್ರವೇ ಅನುಕೂಲ
ವಾಗಿತ್ತು. ಆದುದರಿಂದ ಆಕೆಯು ತನ್ನ ಮಗನೊಂದಿಗೆ ಆ ಮಾರ್ಗದಲ್ಲಿಯೇ
ಪ್ರಯಾಣ ಮಾಡಲು ನಿಶ್ಚೈಸಿ ನ್ಯೂಯಾರ್ಕಿನಿಂದ ಹೊರಟಳು.

ಯಾವಾಗ ಹಡಗು ಹಾರ್ಡ್ ಭೂಪ್ರದೇಶವನ್ನು ಸಮೀಪಿಸಿತೋ ಆಗ ಸಮು
ದ್ರದಲ್ಲಿ ಬಿರುಗಾಳಿ ಎದ್ದಿತು. ಹಡಗಿಗೆ ಮುಳುಗುವ ಸ್ಥಿತಿ ಬಂದೊದಗಿತು.
ಆದುದರಿಂದ ಎಲ್ಲರೂ ಹಡಗಿನಿಂದಿಳಿದು ಲೈಫ್‌ಬೋಟುಗಳನ್ನು ಸೇರಿದರು.
ಯಾವುದೋ ಕಾರಣದಿಂದ ಆ ಸಮಯದಲ್ಲಿ ಆ ಕೆಲಸಗಾರನ ಹೆಂಡತಿಯೂ
ಮಗನೂ ಹಡಗಿನ ಕೆಳಭಾಗದಲ್ಲಿಯೇ ಇದ್ದರು. ಅವರು ಮೇಲಕ್ಕೆ ಬರುವ
ಷ್ಟರಲ್ಲಿಗೆ ಕೊನೆಯ ಲೈಫ್ ಬೋಟ್ ಕೂಡ ಹೊರಡುವದರಲ್ಲಿತ್ತು. ಆದಂದ್ದಿ ಇ
ನ್ನೊಬ್ಬರು ಕೂಡಲು ಕೂಡ ಸ್ಥಳವಿರಲಿಲ್ಲ. ಏನು ಮಾಡುವದು. ಆಕೆಯು ತನ್ನ
ಮಗನಿಗೆ ಲೈಫ್ ಬೋಟಿನಲ್ಲಿ ಕೂಡಲಿಕ್ಕೆ ಹೇಳಿ 'ಮಗು! ನೀನು ನಿನ್ನ ತಂದೆ
ಯನ್ನು ಕಂಡಾಗ ತಾಯಿಯು ನಿನಗಾಗಿ ಮರಣ ಹೊಂದಿದಳು ಎಂದು ತಿಳಿಸು
ವಂದು ಹೇಳಿ ತಾನು ಆ ಹಡಗಿನೊಂದಿಗೆ ಜಲಸಮಾಧಿಯನ್ನು ಹೊಂದಿದಳು.

ಕಂಡಿರಾ! ಮಾತೃಪ್ರೇಮ ಎಂಥಾದ್ದು.



"ಗೋರಕ್ಷಣೆ"

ಕಾರ್ಯ ಎಲ್ಲೆಲ್ಲೂ ನಡೆಯಲಿ

ಉಡ್‌ಲ್ಯಾಂಡ್ಸ್— ಸತ್ಯವಾದಿ

ಬೆಳಗಿನ ಪ್ರದರ್ಶನ — ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

18—5—51 ರಿಂದ — ಪಂಚಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

ಮೀರೆ ರಾಜ — ಸತ್ಯವಾದಿ ಸೋಮವಾರ ಸಂಚಿಕೆ

ಪಾತ್ರ— ಕುಣಿದು ಹಾಡ್ವ ಮೋಡಿ — ವಾರ್ಷಿಕ ಚಂದಾ

(ಮುಂದಾ ಕಿಂದಿ ಚಿತ್ರ) — ಅಂಚೆವೆಚ್ಚ ಸಮೇತ 1—14—0

ಉಡ್‌ಲ್ಯಾಂಡ್ಸ್

11—5—51 ರಿಂದ ಅಮೋಘ ಪ್ರಾರಂಭ

ಬಿರ್‌ಹ ಕಿ ರಾತ್ Birha ki Raat

ಪಾತ್ರ : ನರ್ಗಿಸ್, ದೇವಾನಂದ್, ಸ್ನೇಹಪ್ರಭಾ, ಓಂಪ್ರಕಾಶ್ (ಹಿಂದಿ ಚಿತ್ರ)

ಸಕಲರೂ ನೋಡಬೇಕಾದ ಮನಮೋಹಕ ಚಿತ್ರ — ಪ್ರತಿ ದಿನ 3 ಆಟಗಳು

ರಣಜಿತ್ 11—5—51 ರಿಂದ

SAGAI ನಗಾಯಿ

ರೆಹನಾ, ಯಾಕೂಬ್, ಪ್ರೇಮನಾಥ್, ಗೋಪ್ ಪಾತ್ರವಹಿಸಿರುವ

ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ಕೂಡಿದ ಅಮೋಘ ಹಿಂದೀ ವಾಕ್ಚಿತ್ರ

— ಪ್ರತಿ ದಿನ 3 ಪ್ರದರ್ಶನಗಳು —

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾ
ಮಾನುಗಳೂ ಫರ್ನೀಚರುಗಳೂ ಸುಲಭ
ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

MUNICIPAL OFFICE, MYSORE,
10 th May 1951

Notification

Notice is hereby given to the inhabitants of the Municipality, that the Municipal Council desire to amend the existing bye-laws for Barber Shops, Hair-dressing and shaving saloons framed under Section 51 (1) (b) (vii) of the Mysore City Municipalities Act 1933, so as to reduce the levy of license fee from the present rate of Rs 5 sanctioned in G. O. No. L 5930-1 / CM 27-80-6 dated 1-9-50 to Rs 3 per annum on each Barber shop, Hair-dressing or shaving saloon.

Any inhabitant of the Muncipality objecting to the proposed amendment may within one month from the date of this notice send his objections in writing to the Council.

(Sd) C. Narasimha Moorty
Municipal Commissioer

Edited, Printed and Published by M. S. Krishna Rao, at the Satyavadi Press Chamrajpuram Mysore